ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

Spl. NDPS 8/2020

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಕಿರಣ್ | ಪಿ.ಡಬ್ಲ್ಯೂ. | 7 |
| ತಂದೆಯ ಹೆಸರು | ಃ | ದ್ಯಾಮಪ್ಪ | ಸಿ.ಡಬ್ಲ್ಯೂ. | 5 |
| ವಯಸ್ಸು | ಃ | 30 ವರ್ಷ | | |
| ಉದ್ಯೋಗ | ಃ | ಪೇಂಟಿಂಗ್ ಕೆಲಸ | | |
| ವಾಸ ಸ್ಥಳ | ಃ | ಕಕ್ಕರಗೊಳ್ಳ ಗ್ರಾಮ, | | |

ದಿ.20.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)** ಃ

1. ದಿ.27.12.2019 ರಂದು ಮಾಡಿದ ಸ್ಥಳ ಪಂಚನಾಮೆ ದಾಖಲೆಯನ್ನು ಸಾಕ್ಷಿಗೆ ತೋರಿಸಿ, ಸದರಿ ದಾಖಲೆಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆಯನ್ನು **ನಿಪಿ-33** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-33(ಎ)** ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ತೆಗೆದ ಪೋಟೋವನ್ನು ಸಹ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ಪೋಟೋವನ್ನು **ನಿಪಿ-34** ಎಂದು ಗುರುತಿಸಲಾಯಿತು. ನಿಪಿ-33 ರಲ್ಲಿ ನಾನು ನನ್ನ ಸಹಿಯನ್ನು ಸ್ಥಳದಲ್ಲಿ ಅಂದರೆ ಶಿಶುನಾಳ ಶರೀಫರವರ ಸಮಾಧಿಯಿಂದ ಸುಮಾರು 500 ಮೀಟರ್ ದೂರದಲ್ಲಿ ಮಾಡಿರುತ್ತೇನೆ. ಸದರಿ ಮಹಜರನ್ನು ಗಾಂಜಾ ಕೇಸು ಸಂಬಂಧ ಬರೆದಿರುತ್ತಾರೆ. ಸದರಿ ಜಾಗವನ್ನು ಸತೀಶ್ (2 ನೇ ಆರೋಪಿ) ಎನ್ನುವವರು ತೋರಿಸಿರುತ್ತಾರೆ. ಸತೀಶನೊಂದಿಗೆ ಇನ್ನು ಇಬ್ಬರು ಇದ್ದು, ಅವರುಗಳು ರೇವಣಸಿದ್ದಪ್ಪ ಮತ್ತು ಲೋಕೇಶ (1 ಮತ್ತು 3 ನೇ ಆರೋಪಿತರು ಆಗಿರುತ್ತಾರೆ.) ನ್ಯಾಯಾಲಯದ ಮುಂದೆ ಇರುವ ಮೂವರು ಆರೋಪಿತರಾಗಿರುತ್ತಾರೆ. ಸದರಿ 3 ಜನ ಆರೋಪಿತರು ನಿಪಿ-34 ರ ಪೋಟೋದಲ್ಲಿಯೂ ಇರುತ್ತಾರೆ.

2. ಮಹಜರನ್ನು ಬೆಳಿಗ್ಗೆ 10.45 ರಿಂದ 11.45 ಗಂಟೆಯವರೆಗೆ ಬರೆದಿರುತ್ತಾರೆ. ನಿಪಿ-33 ರಲ್ಲಿ ನನ್ನ ಜೊತೆ ಚಾಸಾ-6, ತನಿಖಾಧಿಕಾರಿ ಸಹಿ ಮಾಡಿರುತ್ತಾರೆ. ಇದೇ ಜಾಗದಲ್ಲಿ ಗಾಂಜಾವನ್ನು ಖರೀದಿಸಿದ್ದಾಗಿ

2 ನೇ ಆರೋಪಿ ಹೇಳಿದರು.

<u>ಪಾಟೀ ಸವಾಲು : ಶ್ರೀ ಕೆ.ಎಚ್.ವಿ, ವಕೀಲರಿಂದ ಆರೋಪಿತರ ಪರವಾಗಿ</u> :

3. ನಾನು ದ್ವಿತೀಯ ಪಿ.ಯು.ಸಿ. ಓದಿದ್ದೇನೆ. ನನ್ನನ್ನು ಪೋಲೀಸರು ಶಿಶುನಾಳ ಗ್ರಾಮಕ್ಕೆ ಕರೆದುಕೊಂಡು ಹೋದರು. ಶಿಶುನಾಳ ಗ್ರಾಮದಿಂದ ಘಟನಾ ಸ್ಥಳ ಅರ್ಧ ಕಿ.ಮೀ. ದೂರ ಇದೆ. ಶಿಶುನಾಳ ಗ್ರಾಮ ಹಾವೇರಿ ಜಿಲ್ಲೆಯಲ್ಲಿ ಇದೆ. ನಿಪಿ-34 ರ ಫೋಟೋದಲ್ಲಿ ಶಿಶುನಾಳ ಗ್ರಾಮ, ಹಾವೇರಿ ಜಿಲ್ಲೆ ಎನ್ನುವ ಬೋರ್ಡ್ ಇರುವುದಿಲ್ಲ.

4. ಆರೋಪಿತರು ಸದರಿ ಗ್ರಾಮಕ್ಕೆ ಎಷ್ಟು ದಿನಗಳ ಹಿಂದೆ ಹೋಗಿದ್ದರು ಎಂದು ನಾನು ಕೇಳಿ ತಿಳಿದುಕೊಂಡಿಲ್ಲ. ಆರೋಪಿತರಿಂದ ಪೋಲೀಸರು ಎಷ್ಟು ಪ್ರಮಾಣದ ಗಾಂಜಾ ವಶಪಡಿಸಿಕೊಂಡರು ಎಂದು ನಾನು ಕೇಳಿ ತಿಳಿದುಕೊಂಡಿಲ್ಲ. ಆರೋಪಿತರು ಯಾರಿಂದ, ಎಷ್ಟು ಮೌಲ್ಯದ, ಎಷ್ಟು ಹಣವನ್ನು ಕೊಟ್ಟು ಗಾಂಜಾವನ್ನು ಖರೀದಿಸಿದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು ಪಕ್ಕೀರ್ ಎಂಬವರಿಂದ ಗಾಂಜಾವನ್ನು ಖರೀದಿ ಮಾಡಿದ್ದೆವೆಂದು ತಿಳಿಸಿದರು ಎಂದು ಹೇಳುತ್ತಾರೆ. ಸದರಿ ಪಕ್ಕೀರವರನ್ನು ನನಗೆ ತೋರಿಸಿಲ್ಲ.

5. ಶಿಶುನಾಳ ಗ್ರಾಮದ ಜನಸಂಖ್ಯೆ ನನಗೆ ಗೊತ್ತಿಲ್ಲ. ನನ್ನನ್ನು ಕರೆದುಕೊಂಡ ಹೋದ ಸ್ಥಳದಲ್ಲಿ ಶಿಶುನಾಳ ಎನ್ನುವ ಬೋರ್ಡ್ ಇತ್ತು. ಶಿಶುನಾಳ ಗ್ರಾಮಸ್ಥರು ಆ ಸ್ಥಳದಲ್ಲಿ ಯಾರೂ ಇರಲಿಲ್ಲ. ಶಿಶುನಾಳ ಗ್ರಾಮದ ಜನರನ್ನು ಪಕ್ಕೀರ ಎಂದು ಕರೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

6. ನಾನು ಪೇಂಟಿಂಗ್ ಕೆಲಸ ಮಾಡುತ್ತೇನೆ. ನನಗೆ ಪೋಲೀಸರು ಒಂದು ಬಾರಿ ಪರಿಚಯ ಆಗಿದ್ದರು. ನಿಪಿ-33 ರಲ್ಲಿ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

7. ಶಿಶುನಾಳ ಗ್ರಾಮಕ್ಕೆ ಹೋಗಲು ಬೆಳಿಗಿನ ಜಾವ 5.30 ಗಂಟೆಗೆ ಕೆ.ಟಿ.ಜೆ. ನಗರ ಪೋಲೀಸ್ ಠಾಣೆಯಿಂದ ಹೊರಟಿರುತ್ತೇವೆ. ನನ್ನ ಮನೆ ಕಕ್ಕರಗೊಳ್ಳ ಗ್ರಾಮದಲ್ಲಿ ಇದೆ. ಕಕ್ಕರಗೊಳ್ಳ ಗ್ರಾಮ

ದಾವಣಗೆರೆಯಿಂದ 9 ಕಿ.ಮೀ. ದೂರ ಇದೆ. ಶಿಶುನಾಳ ಗ್ರಾಮಕ್ಕೆ ಹೋಗಲು ಪೋಲೀಸರು ನನಗೆ ನೋಟೀಸು ಕೊಟ್ಟಿದ್ದರು. ನೋಟೀಸನ್ನು ಯಾವಾಗ ಕೊಟ್ಟಿದ್ದರು ಎಂದು ನನಗೆ ನೆನಪಿಲ್ಲ. ನಿಪಿ-33 ದಾಖಲೆಯನ್ನು ಬರೆದಿದ್ದಾರೆ ಎಂದು ಹೇಳುವ ಸ್ಥಳದ ಚೆಕ್ಕುಬಂದಿ ನನಗೆ ಹೇಳಲಿಕ್ಕೆ ಆಗುವುದಿಲ್ಲ. ಆರೋಪಿತರು ಪೋಲೀಸರಿಗೆ ಪಕ್ಕೀರರನ್ನು ಮತ್ತು ಅವರ ಮನೆಗಳನ್ನು ತೋರಿಸಿಲ್ಲ.

8. ನಿಪಿ-33 ರ ದಾಖಲೆಗೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಪೋಲೀಸರು ನನಗೆ ಚೆನ್ನಾಗಿ ಪರಿಚಯ ಇದ್ದುದರಿಂದ, ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಪೋಲೀಸರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

9. ಗಾಂಜಾ ಸೊಪ್ಪು ಹೇಗಿದೆ ಎಂದು ನಾನು ನೋಡಿಲ್ಲ. ಕೆ.ಟಿ.ಜೆ. ನಗರ ಪೋಲೀಸ್ ಠಾಣೆಯಲ್ಲಿ ಗಾಂಜಾ ಸೊಪ್ಪನ್ನು ನನಗೆ ತೋರಿಸಿಲ್ಲ.

**ಮರು ವಿಚಾರಣೆ** : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

(ರಾಜೇಶ್ವರಿ ಎನ್. ಹೆಗಡೆ)

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.